ಶ್ರೀ ಎಂ. ಎಸ್. ಕೃಷ್ಣನ್.— ಹೆಸರು ಹೇಳಿ ?

ಶ್ರೀ ಬಿ. ಬಸವಲಿಂಗಪ್ಪ.— ಹೆಸರು ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದವರೆ, ಕಾಂಗ್ರೆಸ ಪಕ್ಷಕ್ಕೆ ಸೇರಿದವರೆ ಹೇಳಿ ?

ಶ್ರೀ ಬಿ.ಬಸವಲಿಂಗಪ್ಪ.—ಆಗ ಕಮ್ಯುನಿಷ್ಟ ಪಕ್ಷ ಇರಲಿಲ್ಲ, ನ್ಯೂನತೆಯಾಗಿದೆ ಎಂದು ವರದಿ ಬಂದಿದೆ. ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದು ಕೊಳ್ಳುತ್ತೇನೆ.

ಶ್ರೀ ಕೆ. ಯಂಕಟಪ್ಪ.—ಸ್ವಾಮಿ, ಈಗ ಸರ್ವೆ ನಂಬರ್ ೬೮ ವಿಷಯದಲ್ಲಿ ಹೇಳಿದ್ದಾ ಯಿತು. ಈಗ ಸರ್ವೆ ನಂಬರ ೭೮ಲ್ಲಿ ತೆಗೆದುಕೊಂಡರೆ ಅದೂ ಕೂಡ ಮುಖ್ಯ ವಾಗಿರತಕ್ಕಂಥ ಜಾಗ. ಅದೂ ಕೂಡ ಅಡ್ಮಿನಿಸ್ಟ್ರೇಟರ್ ಕಾಲದಲ್ಲಿ ಅನ್ಯಾಯ ನಡೆ ದಿದೆ. ಆದುದರಿಂದ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀವೆ ಎಂದು ಆಶ್ವಾಸನೆ ಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಆ ಸರ್ವೆ ನಂಬರ ಬಗ್ಗೆ ಆ ರೀತಿ ಏನೂ ರಿಪೋರ್ಟ್‌ನಲ್ಲಿ ಇಲ್ಲ. ಆದರೆ ಮಾನ್ಯ ಸದಸ್ಯರು ಅದರಲ್ಲೂ ಆವಿವೇಕ ನಡೆದಿದೆ ಎಂದು ಹೇಳುತ್ತಾರೆ. ಆ ರೀತಿ ಏನಾದರೂ ಇದ್ದರೆ ಅದನ್ನು ಸರಿಪಡಿಸುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದೆಕ್ಕೆ ಸಿದ್ಧವಾಗಿದ್ದೇನೆ. ಈ ಬಗ್ಗೆ ಈವೊತ್ತೇ ನಿರ್ದೇಶನ ಕಳುಹಿಸುತ್ತೇನೆ.

CONSTRUCTION OF VENTED DAM ACROSS KANCHAR RIVER IN BALUGODU VILLAGE

917. Sri K. SUBRAMANYA GOWDA (Belthangady).— Will the Minister for Public Works and Electricity be pleased to state:—

(a) in which year the construction of a Vented Dam across the Kanchar River in Balugodu Village of Sullia Taluk P. W. D. Mangalore Division, South Kanara was sanctioned and what is its estimated cost;

(b) whether the work of this project has been completed ;

(c) if not, the reasons for leaving it in incomplete stage ;

(d) whether Government propose to complete this project and make it useful to the ryots ;

(e) if so, when?

Sri H. N. NANJE GOWDA.—(Minister of State for Major Irrigation) [on behalf of Sri H. M. CHANNABASAPPA (Minister for Public Works and Electricity)]:—

(a) An estimate of Rs. 58,000 has been sanctioned during 1965–66.

(b) The project Work is not completed in all respects.

(c) The construction of a Vented Dam has been completed. The channel already excavated is in deep cutting. During rainy season, heavy logs of floating timber generally blocks the vents resulting in outflanking of the structure, thus causing heavy damage to the structure. This involves heavy repairs every year. In order to avoid heavy maintenance cost, alternative proposals are being examined.

(d) Yes.

(e) After finalisation of the proposals under examination.

ಶ್ರೀ. ಕೆ. ಸುಬ್ರಹ್ಮಣ್ಯಗೌಡ.—ಸ್ವಾಮಿ, ಇದರಲ್ಲಿ (ಇ)ಗೆ ಉತ್ತರವಾಗಿ ತಾವು ಭಾರಿ ಪ್ರಮಾಣದ ನಿರ್ವಹಣ ವೆಚ್ಚವನ್ನು ಕಡಿಮೆಗೊಳಿಸುವ ದೃಷ್ಟಿಯಿಂದ ಪರ್ಯಾಯ ಸಲಹೆಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಹೇಳಿದ್ದೀರಿ. ಆದುದರಿಂದ ಆ ಪರ್ಯಾಯ ಸಲಹೆಗಳು ಏನು ಎನ್ನುವುದನ್ನು ತಿಳಿಸುತ್ತೀರಾ?

†ಶ್ರೀ ಹೆಚ್. ಎನ್. ನಂಜೇಗೌಡ.—ಈಗ ಏನಾಗಿದೆ ಎಂದರೆ ಈಗ ಇರತಕ್ಕಾಂಥಾದ್ದು ಕಾಡು ಪ್ರದೇಶದಲ್ಲಿ ಇರತಕ್ಕಂಥಾದ್ದು. ಈಗ ಡ್ಯಾಮ್ ಏನು ಆಗಿದೆ ಎಂದರೆ ಮರದ ದಿಮ್ಮಿಗಳಿಂದ ನೀರು ಕೆಳಗೆ ಬಿದ್ದು ಪದೇ ಪದೇ ನೀರು ಹರಿದು ಆ ಡ್ಯಾಮ್ ಲೀಕೇಜ ಆಗುವ ಪರಿಸ್ಥಿತಿ ಇದೆ. ಈಗ ಅದಕ್ಕೆ ಬದಲಾಗಿ ಪಂಪುಸೆಟ್ಟು ಹಾಕಿ ಒಂದು ಫೀಡರ ಛಾನಲ್ ಕನಸ್ಟ್ರಕ್ಟ ಮಾಡಿ ಆ ಪ್ರದೇಶಗಳಿಗೆ ನೀರಾವರಿ ಮಾಡಬೇಕು ಎನ್ನುವ ಉದ್ದೇಶದಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಈ ಬಗ್ಗೆ ಅಲ್ಟರನೇಟೀವ್ ಅರೇಂಜಮೆಂಟ್ಸ ಯಾವುದು ಆಗುತ್ತದೋ ಅದನ್ನು ಪ್ರಾರಂಭ ಮಾಡಿರಿ ಎಂದು ಹೇಳಿದ್ದೇವೆ.

ಶ್ರೀ ಕೆ. ಸುಬ್ರಹ್ಮಣ್ಯಗೌಡ.—ಸ್ವಾಮಿ, ಈ ಪ್ರಶ್ನೆಯ (ಈ)ಗೆ ಉತ್ತರವಾಗಿ ಪರಿಶೀಲನೆಯಲ್ಲಿರುವ ಸಲಹೆಗಳನ್ನು ಅಂತಿಮಗೊಳಿಸಿದ ನಂತರ ಎಂದು ಹೇಳಿದ್ದೀರಿ. ಹಾಗಾದರೆ ಇದಕ್ಕೆ ಎಷ್ಟು ಸಮಯ ಬೇಕಾಗುತ್ತದೆ.

ಶ್ರೀ ಎಚ್. ಎನ್. ನಂಜೇಗೌಡ.—ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಪರಿಂಟೆಂಡೆಂಟ್ ಇಂಜನೀಯರ್ ಮತ್ತು ಎಕ್ಸಿಕ್ಯೂಟೀವ್ ಇಂಜನೀಯರ್ ಇವರುಗಳಿಗೆ ಈಗಾಗಲೇ ಸೂಚನೆ ಕೊಟ್ಟಿದ್ದೀವೆ. ಅವರಿಂದ ಉತ್ತರ ಬಂದ ಮೇಲೆ ಈ ಎರಡರಲ್ಲಿ ಯಾವುದು ಮಾಡಬೇಕೋ ಅದಕ್ಕೆ ಸೂಚನೆ ಕೊಟ್ಟು ಪ್ರಾರಂಭ ಮಾಡಿರಿ ಎಂದು ಹೇಳುತ್ತೀವೆ. ಪ್ರಾರಂಭ ಮಾಡಿದ ಮೇಲೆ ಆದಷ್ಟು ಜಾಗ್ರತೆ ಮುಗಿಯುತ್ತದೆ ಎಂದು ಸರ್ಕಾರದ ಅಭಿಪ್ರಾಯ.

LICENCE FEES FIXED FOR BRINGING A CART LOAD OF FUEL

1014. Sri M. SIDDAMADAIAH (Kollegal).—Will the Minister for Agriculture and Forests be pleased to state:—

(a) the rate of licence fees fixed for bringing a cart load of fuel in Yelandur, Chamarajanagar and Kollegal;

(b) the rate of licence fee that was levied in the beginning *i. e.*, four to five years ago;

(c) whether the Government proposes to reduce the existing rate of licence fees?

Sri K. H. PATIL (Minister for Agriculture and Forests).—

(a) Seigniorage fee of Rs. 5-00 per cart load.

(b) Seigniorage fee of Rs. 2-50 per cart load.

(c) No.

ಶ್ರೀ ಎಂ. ಸಿದ್ದಮಾದಯ್ಯ.—ಸ್ವಾಮಿ, ಈ ಪ್ರಶ್ನೆಯ (ಆ) ಉತ್ತರವಾಗಿ ಪ್ರತಿಯೊಂದು ಗಾಡಿಯ ತುಂಬ ಸೌದೆಗೆ ೨–೫೦ ರೂಪಾಯಿಗಳ ತೆರುವಳಿ ದರವನ್ನು ಮಾಡಿದ್ದೀವೆ ಎಂದು ಹೇಳಿದ್ದೀರಿ. ಮತ್ತು ಇದೇ ಪ್ರಶ್ನೆಯ (ಆ)ಗೆ ಉತ್ತರವಾಗಿ ಈವಾಗ ಪ್ರತಿಯೊಂದು ಗಾಡಿಯ ತುಂಬ ಸೌದೆಗೆ ೫ ರೂಪಾಯಿಗಳ ತೆರುವಳಿ ಶುಲ್ಕವನ್ನು ಮಾಡಿದ್ದೀರಿ. ಈ ರೀತಿ ಮಾಡಿರುವುದರಿಂದ ಬಡ ಜನರಿಗೆ ತುಂಬಾ ತೊಂದರೆ ಆಗಿದೆ. ಆದುದರಿಂದ ಇದನ್ನು ಬಡ ಜನರಿಗೆ, ಉಪಕಾರ ಮಾಡುವ ದೃಷ್ಟಿಯಿಂದ ಕಡಿಮೆ ಮಾಡುತ್ತೀರಾ?

†ಶ್ರೀ ಕೆ. ಎಚ್. ಪಾಟೀಲ.—ಈ ಸುಂಕವನ್ನು ಎಲ್ಲದಕ್ಕೂ ಮಾಡಿಲ್ಲ. ಸೌದೆಯನ್ನು ಮನೆಗೆ ಉಪಯೋಗಿಸತಕ್ಕವರಿಗೆ ೨–೫೦ ರೂಪಾಯಿಗಳು ಇದೆ, ಸೌದೆಯನ್ನು ಮಾರಾಟ ಮಾಡುವವರಿಗೆ ಮಾತ್ರ ೫ ರೂಪಾಯಿ ಸುಂಕ ಇದೆ.